**ಕ್ರಿ.ಮಿ.ನಂಃ 118/2026**

**ಪಿಡಬ್ಲ್ಯೂಃ 1**

**ದಿನಾಂಕಃ 25.05.2026**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ಟಿ.ಎಸ್.ಎಸ್ .ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ರೂಪದಲ್ಲಿ ಸಲ್ಲಿಸುತ್ತಿದ್ದು ಅದನ್ನು ನನ್ನ ಮಾಹಿತಿ ಮೇರೆಗೆ ನನ್ನ ವಕೀಲರು ತಯಾರಿಸಿರುತ್ತಾರೆ. ಅದರಲ್ಲಿ ಬರೆದಿರುವ ಸಂಗತಿಗಳು ನಿಜ ಇರುತ್ತವೆ ಮತ್ತು ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

ಗಂಗಮ್ಮ ಕೋಂ. ಲೇಟ್ ಮಾಲೇಗೌಡ ಇವರು ನನ್ನ ತಾಯಿ. ಸದರಿ ಅವರು ದಿಃ 15/03/2023 ರಂದು ಮರಣ ಹೊಂದಿರುತ್ತಾರೆ. ಸರ್ಕಾರಿ ಸೌಲಭ್ಯವನ್ನು ಪಡೆಯಲು ನನ್ನ ತಾಯಿಯ ಮರಣ ಪ್ರಮಾಣ ಬೇಕಾಗಿರುತ್ತದೆ.

ಅಲಭ್ಯ ಪ್ರಮಾಣ ಪತ್ರ ನಿಪಿ.1 ಎಂದು, ವಂಶಾವಳಿ ಪ್ರಮಾಣ ಪತ್ರವನ್ನು ನಿಪಿ-2 ಎಂದು, 2 ನೇ ಅರ್ಜಿದಾರರ ಆಧಾರ ಕಾರ್ಡ್ ಗಳ ನೋಟರೈಸ್ಡ ಪ್ರತಿಯನ್ನು ಹಾಜರುಪಡಿಸಿದ್ದು, ಅದನ್ನು ಅಸಲು ಪ್ರತಿಯೊಂದಿಗೆ ತಾಳೆ ಮಾಡಿ ನೋಡಿ ನೋಟರೈಸ್ಡ ಪ್ರತಿಯನ್ನು ನಿಪಿ-3 ಎಂದು ಗುರುತಿಸಲಾಯಿತು, ಆಧಾರ ಕಾರ್ಡನ ಅಸಲು ಪ್ರತಿಗಳನ್ನು ಸಾಕ್ಷಿದಾರರ ದಿನದಿತ್ಯದ ಉಪಯೋಗಕ್ಕೆ ಬೇಕಾಗಿರುವುದರಿಂದ ಅಸಲು ಪ್ರತಿಗಳನ್ನು ಸಾಕ್ಷಿದಾರರಿಗೆ ವಾಪಸ್ಸು ನೀಡಲಾಯಿತು. ದಿಃ 03.05.2026 ರಂದು ರಾಜ್ಯಧರ್ಮ ಮತ್ತು ಪ್ರಜಾಸತ್ತ ದಿನಪತ್ರಿಕೆಯಲ್ಲಿ ನೀಡಿದ ಪ್ರಕಟಣೆಯನ್ನು ನಿಪಿ-4 ಮತ್ತು 5 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಎದುರುದಾರ ಪರವಾಗಿಃ**

ಎದುರುದಾರರು ಏಕತರ್ಫಿಯಾಗಿರುವುದರಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ.

1 ನೇ ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಕೆ.ಆರ್.ನಗರ.